ಜಂಗಲ ಖಾತೆಯ ಅಮಲದಾರರಿಗೆ ಸೂಚನೆಗಳು.

ಗ್ರಾಮಸುಧಾರಣೆಯ ಯೋಜನೆಯಲ್ಲಿ ಜಂಗಲ ಅಮಲದಾರನ ಮುಖ್ಯ ಕರ್ತವ್ಯವು, ಅವಶ್ಯವಿದ್ದಾಗ್ಗೆ ತಜ್ಞ ಆಲೋಚನೆಯನ್ನು ಹೇಳುವದು ಮತ್ತು ಕೆಲಸವನ್ನು ಸರಿಯಾಗಿ ಮಾಡಿದರೆ ಸುಧಾರಣೆಯು ಹೇಗೆ ಆಗುವದೆಂಬದರ ಬಗ್ಗೆ ವ್ಯಾವಹಾರಿಕ ಪ್ರದರ್ಶನವನ್ನು ಮಾಡಿ ತೋರಿಸುವದು ಇರುತ್ತದೆ.

ಸದರಿ ಯೋಜನೆಯನ್ವಯ, ವೈಯಕ್ತಿಕ ಕೆಲಸಗಾರರು ಅಥವಾ ಸ್ಥಾನಿಕ ಮಂಡಳಗಳು ಸುಧಾರಣೆಯು ಅವಶ್ಯವಿದ್ದ ವಿಷಯಗಳನ್ನು ತಾವೇ ತೋರಿಸಿಕೊಡುವ ವೆಂಬ ಆಶೆಯಿದೆ. ಆದರೆ ಜಂಗಲ ಗ್ರಾಮಗಳಲ್ಲಿಯ ವಸ್ತುಸ್ಥಿತಿಗಳನ್ನು ಚನ್ನಾಗಿ ಅರಿತಿರುವ ಜಂಗಲ ಅಮಲದಾರರು ಸಹ ಉಪಯುಕ್ತ ಸೂಚನೆಗಳನ್ನು ಮಾಡಲಿಕ್ಕೆ ಸಮರ್ಥರಿರುತ್ತಾರೆ. ಇಂಥ ಯಾವದೇ ಸೂಚನೆಯನ್ನು, ಕಲೆಕ್ಟರನು ಜೆಅರಮನ್ನ ನಾಗಿರುವ ಜಿಲ್ಲಾ ಕಾರ್ಯಕಾರೀ ಕಮಿಟಿಯ ಲಕ್ಷ್ಯಕ್ಕೆ ತಂದುಕೊಡಬೇಕು.

ಹಳೇ ಮತದ ಗ್ರಾಮನಿವಾಸಿಯು ಉಪದೇಶಕ್ಕೆ ಲಕ್ಷ್ಯಗೊಡುವದಿಲ್ಲ, ಆದರೆ ಉದಾಹರಣೆಯ ಪರಿಣಾಮವು ಅವನ ಮೇಲೆ ಕೂಡಲೆ ಆಗುತ್ತದೆ. ಉದಾಹರಣಾರ್ಥವಾಗಿ, ಸಿಂಧದಲ್ಲಿ ಜಾಲೀ ಗಿಡಗಳ ತೋಟಗಳನ್ನು ಸ್ಥಾಪಿಸುವದರಲ್ಲಿ ಮತ್ತು ಬೆಳಿಸುವದರಲ್ಲಿ ಜಂಗಲ ಖಾತೆಯವರು ಕೈಕೊಂಡ ತೀಕ್ಷ್ಣವಾದ ಉಪಾಯಗಳಿಂದ ಜಮೀನದಾರರಲ್ಲಿ ಉತ್ಸುಕತೆಯುಂಟಾಯಿತು ಮತ್ತು ಈ ಉಪಾಯಗಳು ಯಶಸ್ವಿಯಾದ್ದರಿಂದ, ಅವರು ಕೂಡಲೆ ಅವುಗಳ ಅನುಕರಣ ಮಾಡಿ ಬಹಳ ಲಾಭ ಪಡೆದರು.

ಮುಂದಿಟ್ಟ ಯಾವದೇ ಸೂಚನೆಯು ವ್ಯಾವಹಾರಿಕವಾದದ್ದಿರುತ್ತದೆ ಮತ್ತು ಅದರಿಂದ ನಿಜವಾಗಿ ಪರಿಣಾಮಗಳುಂಟಾಗುತ್ತವೆ ಎಂದು ಪ್ರಯೋಗ ಮಾಡಿ ಸಿದ್ಧ ಮಾಡಿಕೊಡುವದು ಉತ್ಸುಕತೆಯನ್ನುಂಟುಮಾಡುವದಕ್ಕೆ ಅವಶ್ಯವಾಗಿದೆ.

ಈ ಕಾರಣದ ಬಗ್ಗೆ, ಸರತಿಯ ಪ್ರಕಾರ ಹುಲ್ಲು ಮೇಯಿಸೋಣ ಅಥವಾ ಗ್ರಾಮದಲ್ಲಿ ಸಣ್ಣ ತೋಟಗಳನ್ನು ಮಾಡೋಣ ಮುಂತಾದ ವಿಷಯಗಳ ಮೇಲೆ ಬಹು ದೊಡ್ಡ ಪ್ರಮಾಣದಲ್ಲಿ ಪ್ರಯೋಗ ಮಾಡುವದಕ್ಕೆ ಉತ್ತೇಜನ ಕೊಡುವದು ತಪ್ಪಾಗುವದು. ಇಂಥ ಯಾವದೇ ಪ್ರಯೋಗವು, ಯಶಸ್ಸು ದೊರೆಯುವ ಖಾತ್ರಿ ತೋರುವಂಥ ಒಂದು ಗ್ರಾಮದಲ್ಲಿ ಮೊದಲು ಕಾಳಜಿಪೂರ್ವಕವಾಗಿ ಮಾಡಲ್ಪಡಬೇಕು ಮತ್ತು ಸಾವಕಾಶವಾಗಿ ಪ್ರಗತಿ ಮಾಡುವ ಧೋರಣವನ್ನು ಕಾಳಜಿಪೂರ್ವಕವಾಗಿ ಅನುಸರಿಸಬೇಕು.

ಈ ಚಳವಳಿಯಲ್ಲಿ ಉತ್ಸುಕತೆಯುಳ್ಳ ಕೆಲಸಗಾರರೊಡನೆ ಕೂಡಿ ಕೆಲಸ ಮಾಡುವದರಿಂದ, ಜನಸಾಮಾನ್ಯರೊಳಗಿನ ತಪ್ಪು ಕಲ್ಪನೆಗಳನ್ನು ದೂರ ಪಡಿಸುವದಕ್ಕೆ ಮತ್ತು ಗ್ರಾಮನಿವಾಸಿಗಳು ತಮ್ಮ ಸ್ವಂತ ಹಿತಸಂಬಂಧಗಳಿಗೆ ವಿರೋಧವಾಗಿ ವರ್ತಿಸುತ್ತಿರುವ ಬಾಬತುಗಳಲ್ಲಿ ಅವರಿಗೆ ಆಲೋಚನೆಯನ್ನು ಕೊಡುವದಕ್ಕೆ ಜಂಗಲ ಅಮಲದಾರರಿಗೆ ಒಂದು ಅಪೂರ್ವ ಸಂಧಿಯು ದೊರೆಯುವದು. ಠಾಣೆ ಜಿಲ್ಹೆಯಲ್ಲಿ ತಹಾಲ ಕಡಿಯುವದು ಮತ್ತು ಕಾನಡಾ ಜಿಲ್ಹೆಯಲ್ಲಿ ಜಂಗಲಿನ ಸವಲತುಗಳನ್ನು ಉಪಯೋಗಿಸಿಕೊಳ್ಳುವದು ಮುಂತಾದ ವಿಷಯಗಳ ಬಗ್ಗೆ ಸರಕಾರದವರು

ಮಾಡಿದ ಕಾನೂನುಗಳು, ಗಿಡಗಳು ನಷ್ಟವಾಗುವ ಕ್ರಮವನ್ನು ಮಾತ್ರ ಕಡಿಮೆ ಮಾಡುತ್ತವೆ, ಆದರೆ ಗ್ರಾಮನಿವಾಸಿಗಳು ವಿಚಾರಪೂರ್ವಕವಾಗಿ ಸಹಕಾರ ಮಾಡಿದರೆ, ಈ ಕ್ರಮವು ಈ ಮೊದಲೇ ಅತಿಶಯ ಬೆಳೆದುಹೋದ ಸ್ಥಳಗಳ ಹೊರ್ತು, ಇತರ ಕಡೆಗೆ ಈ ಸವಲತುಗಳನ್ನು ಅನೇಕ ಬಾಬತುಗಳಲ್ಲಿ ಮುಂದೆ ಯಾವತ್ತು ಕಾಲದ ವರೆಗೆ ಉಪಭೋಗ ಮಾಡುವ ಬಗ್ಗೆ ಖಾತ್ರಿಯುಂಟಾಗುವದು. ಜಂಗಲ ಖಾತೆಯವರು ಈ ಬಾಬತುಗಳಲ್ಲಿ ಉಪಯುಕ್ತವಾದ ಆಲೋಚನೆಯನ್ನು ಕೊಡಲಿಕ್ಕೆ ಸಮರ್ಥರಿರುತ್ತಾರೆ, ಮತ್ತು ಸರಿಯಾದ ವಾತಾವರಣವು ದೊರೆತು ವ್ಯಾವಹಾರಿಕ ಪ್ರಯೋಗದ ಸಹಾಯವೂ ಸಿಕ್ಕರೆ, ಸದರಿ ಆಲೋಚನೆಯನ್ನು ಸ್ವೀಕರಿಸಬಹುದು.

BOMBAY : PRINTED AT THE GOVERNMENT CENTRAL PRESS.